ಕೋಲಾರ ಬ್ಯಾಂಕ್ ಲಿಮಿಟೆಡ್‌ನಿಂದ.

ಪ್ರಕಟನೆ.

ಈ ಸಂಘದ ಷೇರು ಹೋಲ್ಡರಾದ ಕುಂದಲಗುರಕಿ ವೆಂಕಣ್ಣನವರು, ಈ ಬ್ಯಾಂಕಿಗೆ ಕೊಡಬೇಕಾದ ದೇಣಿಗಾಗಿ ಅವರ 206ನೇ ನಂಬರ್ ಲಾಗಾಯತು 215ನೇ ನಂಬರ್ ವರಿಗಿನ 10 ರೂಪಾಯಿನ ಬಾಬತು 10 ಷೇರುಗಳನ್ನ 1869ನೇ ಇಸವಿ ಮೇ 23ನೇ ತಾರೀಖಿನ ರಿಜೊಲ್ಯೂರ್ಷ 7ನೇ ಪ್ಯಾರಾ ಪ್ರಕಾರ ಬ್ಯಾಂಕ್ ಹೌಸಿನ ರೂಬರೂ ಮಾರ್ಚೀ 26ನೇ ತಾರೀಖು ಮಧ್ಯಾನ್ನ 12 ಘಂಟೆ ಲಾಗಾಯತು ಸಾಯಂಕಾಲ 5 ಘಂಟೆ ವರಿಗೆ ಈ ಕೆಳಗೆ ರುಜುಮಾಡಿ ಯಿರುವವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಷರತ್ತು—ನಗದು ಹಣ.

ತಾರೀಖು 6ನೇ ಮಾಹೆ ಮಾರ್ಚೀ 1884ನೇ ಇಸವಿ.

ವೆ॥ ಚಿಕ್ಕರಾಮಂಣ,
ಮಿಜಂಟ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1884ನೇ ಇಸವೀ ಅರ್ಜೀ ನಂಬರ್ 91.

ಮೃತಪಟ್ಟ ಲಿಂಗಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕರೀಗೌಡ ಮೈನರ್, ಗಾರ್ಡಿಯರ್ ಮತ್ತು ತಂದೆ ಕರೀಗೌಡ, ಮೃತಪಟ್ಟ ಸದರೀ ಲಿಂಗಮ್ಮನಿಗೆ ದತ್ತು ಮಗ ಅಗಬೇಕೆಂಬ ಹಕ್ಕುದಾರಿ ಮೇಲೆ ಹೆಗ್ಗಡದೇವನಕೋಟೆ ತಾಲ್ಲೂಕು ಮಟ್ಟಿಕೆರೆ ಸ್ಥಳದ ಕರೀಗೌಡನು, ಸದರೀ ವಾಸಸ್ಥಳಾಗಿ ಮೃತಪಟ್ಟ ಸದರೀ ಕರೀಗೌಡನ ಜಿಂದಗೀ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕರೀಗೌಡನ ಅರ್ಜೀಯನ್ನು 1884ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 7ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಿಂಗಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಮಾರ್ಚೀ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎನ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ಇಸ್ತಿಹಾರ್ ನಾಮಾ.

ತಾರೀಖು 3ನೇ ಮಾರ್ಚೀ 1884.

ಇದರಿಂದ ಪ್ರಕಟಪಡಿಸುವದೇನಂದರೆ, ಚಾಮರಾಜನಗರ ತಾಲ್ಲೂಕಿನಲ್ಲಿ ಖಿಷ್ಣಾಯಾನೆ ಅನೆಗಳನ್ನ ಹಿಡಿಯತಕ್ಕ ಕೆಲಸ ನಡಿಸಲ್ಪಡುವದರಿಂದ ಸಾಲ್ ಮಜಕೂರ್ ಮೇ 1ನೇ ಮರ್ಕುಂ ಲಾಗಾಯತು ಆಗಸ್ಟು 31ನೇ ಮರ್ಕುಂವರಿಗೆ, ಚಾಮರಾಜನಗರಕ್ಕೂ, ಹುಣಸೂರಿಗೂ, ಮಧ್ಯದಲ್ಲಿರುವ ಸರ್ಕಾರದ ರಸ್ತೆಗೆ ಪೂರ್ವ ದಿಕ್ಕಿನಲ್ಲಿರುವ ಯಾವ ಡಿಸ್ಟ್ರಿಕ್ಟು ಜಂಗ್ಲಿಯಲ್ಲಾಗಲಿ ಷಿಕಾರಿ ಆಡುವ ಬಗ್ಯೆ ಅಪ್ಪಣೆ ಕೊಡಲ್ಪಡುವದಿಲ್ಲವು.

ಎ. ಕುಪ್ಪುಸಾಮಿ ಮೊದಲಿಯಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಫ್ರೆಂಚ್‌ರಾಕ್ಸ್ ಸಬ್ ಡಿವೀರ್ಜ್.

ತಾರೀಖು 27ನೇ ಮಾಹೆ ಫಿಬ್ರವರೀ 1884ನೇ ಇಸವಿ, ಮೊಕ್ಕಾಂ ಹಿರೋಡೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಅತ್ತಿಕುಪ್ಪಾ ತಾಲ್ಲೂಕು ಕಿಕ್ಕೇರಿ ಕಸಬಾ ಗ್ರಾಮದಲ್ಲಿ ಇರುವ ಲೇಟ್ ತಾಲ್ಲೂಕು ಕಛೇರಿಯನ್ನು ಯಿಲ್ಲಿನ ಸಾಲ್ ಗುದಸ್ತೆ ಡಿಸಂಬರ್ 1ನೇ ಮರ್ಕುಂ 692–1032ನೇ ನಂಬರ್ ಹುಕ್ಕುಂ ಅನುಸರಿಸಿ, 1884ನೇ